ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಸೋಮವಾರ 4ನೇ ಮಾರ್ಚ್ 1996 ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 9.30 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ರಮೇಶ್ ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಕಾರವಾರ - ಬಳ್ಳಾರಿ ರಸ್ತೆಗೆ ಕೊಪ್ಪಳದ ಹತ್ತಿರ ಬೈಪಾಸ್ ರಸ್ತೆ

121 - ಶ್ರೀ ಸಂಗಣ್ಣ ಕರಡಿ (ಕೊಪ್ಪಳ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕೊಪ್ಪಳದ ಮೇಲೆ ಬರುವ ಕಾರವಾರ ಬಳ್ಳಾರಿ ರಸ್ತೆಯನ್ನು ಬೈಪಾಸ್ ರಸ್ತೆಯನ್ನಾಗಿ ಮಾಡುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಬಂದಿದ್ದಲ್ಲಿ 1996-97ನೇ ಸಾಲಿನಲ್ಲಿ ಬೈಪಾಸ್ ರಸ್ತೆಯನ್ನು ಮಾಡಲಾಗುವುದೇ?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಕೊಪ್ಪಳ ಪಟ್ಟಣ ಪ್ರದೇಶದಲ್ಲಿ ಬರುವ ಕಾರವಾರ -ಬಳ್ಳಾರಿ ರಸ್ತೆಗೆ ಬೈಪಾಸ್ ರಸ್ತೆ ಮಾಡುವ ಬಗ್ಗೆ ಯಾವುದೇ ಪ್ರಸ್ತಾವನೆ ಸರ್ಕಾರದಲ್ಲಿ ಇರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಸಂಗಣ್ಣ ಅಮರಪ್ಪ ಕರಡಿ : ಸನ್ಮಾನ್ಯ ಅಧ್ಯಕ್ಷರೆ, ಕೊಪ್ಪಳದ ಮೇಲೆ ಬರುವ ಕಾರವಾರ -ಬಳ್ಳಾರಿ ರಸ್ತೆಗೆ ಬೈಪಾಸ್ ರಸ್ತೆ ನಿರ್ಮಾಣದ ಅಂಗವಾಗಿ ನಾನು ಪ್ರಶ್ನೆ ಹಾಕಿದ್ದೆ. ಆದರೆ ಸನ್ಮಾನ್ಯ ಮಂತ್ರಿಗಳು ಆ ಪ್ರಸ್ತಾವನೆ ಇಲ್ಲ ಅನ್ನುವುದನ್ನು ಉತ್ತರದಲ್ಲಿ ದೊರಕಿಸಿದ್ದಾರೆ. ಆದರೆ ಆ ಹಿನ್ನೆಲೆಯಲ್ಲಿ ಇವತ್ತು ಆ ಬೈಪಾಸ್ ರಸ್ತೆ ಅಂಗವಾಗಿ ಕೊಪ್ಪಳ ನಗರದಲ್ಲಿ ಒಂದು ವಾರದಿಂದ ಕಟ್ಟಡಗಳನ್ನು ಕೆಡವುದು ಮತ್ತು ಅಂಗಡಿಗಳನ್ನು ಕಿತ್ತು ಹಾಕುವ ಒಂದು ವ್ಯವಸ್ಥೆ ಇದೆ. ಅಂತಹ ಒಂದು ಸಂಚಾರದ ಅಸ್ತವ್ಯಸ್ತ ಇರುವುದರಿಂದ ಇವತ್ತಿನ ದಿವಸ ಆ ಕೆಲಸ ನಡೆದಿದೆ. ಆದ್ದರಿಂದ ಸಂಬಂಧಪಟ್ಟ ಮಂತ್ರಿಗಳು ಉತ್ತರಿಸಬೇಕೆಂದು ನಾನು ಕೇಳುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು ಕೊಪ್ಪಳ ನಗರದಲ್ಲಿ ಒಂದು ಬೈಪಾಸ್ ರಸ್ತೆ ಮಾಡುವ ಯೋಚನೆ ಸರ್ಕಾರದ ಹಂತದಲ್ಲಿ ಇದೆಯೇ ಎಂದು ಕೇಳಿದ್ದಾರೆ. ಸರ್ಕಾರದ ಗಮನದಲ್ಲಿ ಅಮ ಯಾವುದು ಇಲ್ಲ. ಅತಿ ಅವಶ್ಯ ಇದ್ದರೆ ಅದರ ಬಗ್ಗೆ ನಾನು ಸರ್ವೇ ಮಾಡಿಸುತ್ತೇನೆ, ಸರ್ವೇ ರಿಪೋರ್ಟ್ ಬಂದ ನಂತರ ಅದು ಅವಶ್ಯ ಕಂಡುಬಂದಲ್ಲಿ ಮುಂದಿನ ಕ್ರಮ ತೆಗೆದುಕೊಳ್ಳಲು ಪರಿಶೀಲಿಸಲಾಗುವುದು. ಎರಡನೆಯದಾಗಿ ಕಟ್ಟಡ ಕೆಡವುದಕ್ಕೆ ಹತ್ತಿದ್ದಾರೆ ಎನ್ನುತ್ತಾರೆ. ನಾವು ಯಾವುದೇ ಕಟ್ಟಡ ಕೆಡವುದಿಲ್ಲ. ಆದರೆ ಇವತ್ತು ಎಲ್ಲಾದರೂ ಎನ್ ಕ್ರೋಚಮೆಂಟ್ ರಸ್ತೆ ಆಗುತ್ತಿದ್ದರೆ, ಕೆಲವು ಅನಿವಾರ್ಯವಾಗಿ ತೆಗೆಸಲೇಬೇಕಾಗುತ್ತದೆ. ಒಂದು ಮಾತು ನಾನು ಈ ಸಭೆಗೆ ಹೇಳುತ್ತಿದ್ದೇನೆ, ಲೋಕೋಪಯೋಗಿ ಇಲಾಖೆಯ ರಸ್ತೆ ಮೇಲೆ ಯಾರಾದರೂ ಎನ್ ಕ್ರೋಚ್ ಮೆಂಟ ಮಾಡುತ್ತಿದ್ದರೆ ನಾವು ಎನ್ ಕ್ರೋಚ್‌ಮೆಂಟ್ ಸಹಿಸುವುದಿಲ್ಲ. ಏಕೆಂದರೆ ಅಪಘಾತವಾಗುತ್ತದೆ. ಅದರ ಸಲುವಾಗಿ ಅತಂಹ ಪ್ರಸಂಗದಲ್ಲಿ ನಾವು ಕಟ್ಟುನಿಟ್ಟಾಗಿ ತೆಗೆಸುತ್ತೇವೆ.

ಶ್ರೀ ಅಮರಪ್ಪಕರಡಿ : ಸನ್ಮಾನ್ಯ ಅಧ್ಯಕ್ಷರೆ, ಎನ್ ಕ್ರೋಚ್ ಮೆಂಟ ಮಾಡಿದಾಗ ಅದನ್ನು ತೆಗೆಸತಕ್ಕಂಥದ್ದು ಸ್ವಾಭಾವಿಕ. ಆದರೆ ಯಾವುದೇ ಪೂರ್ವಾಲೋಚನೆಯಿಂದ ಅವರಿಗೆ ನೋಟಿಸ್ ಜಾರಿ ಮಾಡಬೇಕಾಗುತ್ತದೆ. ಆ ಹಿನ್ನೆಲೆಯಲ್ಲಿ ಜಾರಿ ಮಾಡಿ ಅಥವಾ ಅವರಿಗೆ ಒಂದು ಪರ್ಯಾಯ ವ್ಯವಸ್ಥೆಯನ್ನು ಮಾಡಿದರೆ ಸರಿ ಎಂದು ನನ್ನ ಭಾವನೆ. ಆ ದಿಸೆಯಲ್ಲಿ ಸಭಾಧ್ಯಕ್ಷರಲ್ಲಿ, ಸನ್ಮಾನ್ಯ ಮಂತ್ರಿಗಳಲ್ಲಿ ನಾನು ಕೇಳುತ್ತೇನೆ. ಅದಕ್ಕೆ ಪರ್ಯಾಯ ವ್ಯವಸ್ಥೆ ಮಾಡಿ ಅಲ್ಲಿ ನೂರಾರು ಹಬ್ಬದ ಅಂಗಡಿಗಳು ಮತ್ತು ಸಣ್ಣ ಪುಟ್ಟ ವ್ಯಾಪಾರಿ ಮಳಿಗೆಗಳು ಇವತ್ತು ಕಿತ್ತು ಹಾಕಿದ್ದಾರೆ. ಅದಕ್ಕೆ ಅವರಿಗೆ ಏನಾದರೂ ಒಂದು ಕಾಂಪೆನ್ ಸೇಷನ್ ಅಥವಾ ಪರ್ಯಾಯ ವ್ಯವಸ್ಥೆಯನ್ನು ಸರ್ಕಾರ ಒದಗಿಸಿಕೊಡಬೇಕೆಂದು ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಸನ್ಮಾನ್ಯ ಅಧ್ಯಕ್ಷರೆ, ಮೊನ್ನೆ ದಿವಸ ನಮ್ಮ ಮುಖ್ಯ ಮಂತ್ರಿಗಳು ಸವಿಸ್ತಾರವಾಗಿ ಇದರ ಬಗ್ಗೆ ಉತ್ತರ ಕೊಟ್ಟಿದ್ದಾರೆ ಅದೇ ಉತ್ತರ ಇವತ್ತಿನ ದಿವಸ ನನ್ನ ಮೇಲೆ ಬಂಧನಕಾರಿಯಾಗಿದೆ. ಎರಡನೆಯದಾಗಿ ಅವರ ಜಾಗವನ್ನು ನಾವು ಅತಿಕ್ರಮಣ ಮಾಡಿದರೆ ಅಥವಾ ಎನ್ ಕ್ರೋಚ್‌ಮೆಂಟ್ ಮಾಡಿದರೆ, ಸರ್ಕಾರ ತೆಗೆದುಕೊಂಡರೆ ಮಾತ್ರ ನಾವು ಕಾಂಪನಸೇಷನ್ ಕೊಡಬೇಕಾಗುತ್ತದೆ. ನಮ್ಮ ಜಾಗವನ್ನು ಅವರು ಎನ್ ಕ್ರೋಚ್ಮೆಂಟ್ ಮಾಡಿದರೆ ನಾವು ಕಾಂಪೆನ್ಸೇಷನ್ ಕೊಡುವಂತಹ ಪ್ರಸಂಗ ಬರುವುದಿಲ್ಲ. ಆದ ಕಾರಣ ಏನಾದರೂ ಜಾಗ ನಾವು ತೆಗೆದುಕೊಂಡಲ್ಲಿ ನಾವು ಸರ್ಕಾರದ ನಿಯಮಗಳ ಪ್ರಕಾರ ಕಾಂಪೆನ್ ಸೇಷನ್ ಕೊಡುತ್ತೇವೆ. ಆದರೆ ನಮ್ಮ ಸರ್ಕಾರದ ಜಾಗ ಇದ್ದರೆ ಕಾಂಪೆನ್ ಸೇಷನ್ ಕೊಡುವುದಕ್ಕೆ ಬರುವುದಿಲ್ಲ.

ಚಿತ್ರದುರ್ಗ ಜೋಗಮಟ್ಟಿಯಲ್ಲಿ ಗಾಳಿಯಿಂದ ವಿದ್ಯುತ್ ಉತ್ಪಾದನೆ.

123 - ಶ್ರೀ ಎಮ್. ಚಂದ್ರಪ್ಪ (ಭರಮಸಾಗರ) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?